BKN-11

Sl.No. :

Total No. of Pages : 2

ಪ್ರಥಮ ವರ್ಷದ ಬಿ.ಎ. ಪದವಿ ಪರೀಕ್ಷೆ, ಮೇ/ಜೂನ್ - 2025

(SLM Scheme)

ಐಚ್ಛಿಕ ಕನ್ನಡ (ಪತ್ರಿಕೆ–೧)

ಕನ್ನಡ ಸಾಹಿತ್ಯ ಚರಿತ್ರೆ

ಸಮಯ : 3 ಗಂಟೆಗಳು **ಗರಿಷ್ಠಾಂಕಗಳು : 80**

ಸೂಚನೆ : ಎಲ್ಲಾ ವಿಭಾಗಗಳಿಗೂ ಉತ್ತರಿಸಿ.

ವಿಭಾಗ–ಎ

(20 ಅಂಕಗಳು)

ಪ್ರ1) ಇವುಗಳಲ್ಲಿ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ. **[4×5=20]**

೧) ಸಾಹಸ ಭೀಮ ವಿಜಯ

೨) ಪಂಪರಾಮಾಯಣ

೩) ಗಿರಿಜಾ ಕಲ್ಯಾಣ

೪) ಪ್ರಭುಲಿಂಗ ಲೀಲೆ

೫) ನವ್ಯ ಸಾಹಿತ್ಯ

೬) ದಲಿತ–ಬಂಡಾಯ ಸಾಹಿತ್ಯ

ವಿಭಾಗ–ಬಿ

(30 ಅಂಕಗಳು)

ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **[3×10=30]**

ಪ್ರ2) ಕನ್ನಡ ಸಾಹಿತ್ಯ ಚರಿತ್ರೆಯ ವಿಭಾಗ ಕ್ರಮಗಳನ್ನು ಕುರಿತು ವಿಶ್ಲೇಷಿಸಿ.

ಅಥವಾ

ಪಂಪನ ಕಾಲ, ದೇಶ, ಕೃತಿಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿ.

ಪ್ರ3) ರಾಘವಾಂಕನ ಕೃತಿಗಳು ಯಾವುವು? ಅವುಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿ.

ಅಥವಾ

ಕನ್ನಡ ಸಾಹಿತ್ಯಕ್ಕೆ ದಾಸ ಸಾಹಿತ್ಯದ ಕೊಡುಗೆಗಳೇನು? ಚರ್ಚಿಸಿ.

ಪ್ರ4) ಕವಿ ಲಕ್ಷ್ಮೀಶನ ಕಾಲ, ದೇಶ ಮತ್ತು ಕೃತಿಯನ್ನು ಕುರಿತು ವಿವರಿಸಿ.

ಅಥವಾ

ರತ್ನಾಕರವರ್ಣಿಯ ಭರತೇಶ ವೈಭವ ಕೃತಿಯ ಯೋಗ ಭೋಗದ ಸಮನ್ವಯವನ್ನು ಕುರಿತು ವಿಶ್ಲೇಷಣೆ ಮಾಡಿ.

ವಿಭಾಗ–ಸಿ

(30 ಅಂಕಗಳು)

ಒಂದು ಪ್ರಶ್ನೆಗೆ ಉತ್ತರ ಬರೆಯಿರಿ. **[1×15=15]**

ಪ್ರ5) ಕುಮಾರವ್ಯಾಸ ಭಾರತದ ಪಾತ್ರ ಚಿತ್ರಣ ಮತ್ತು ಸನ್ನಿವೇಶ ನಿರ್ಮಾಣದ ವೈಶಿಷ್ಟ್ಯಗಳನ್ನು ವಿವರಿಸಿ.

ಪ್ರ6) ನವೋದಯ ಸಾಹಿತ್ಯದ ಹುಟ್ಟು, ಬೆಳವಣಿಗೆ, ಪ್ರೇರಣೆ ಮತ್ತು ಪ್ರಭಾವಗಳನ್ನು ಕುರಿತು ಬರೆಯಿರಿ.

ಒಂದು ಪ್ರಶ್ನೆಗೆ ಉತ್ತರ ಬರೆಯಿರಿ. **[1×15=15]**

ಪ್ರ7) ಪ್ರಗತಿಶೀಲ ಸಾಹಿತ್ಯದ ಪ್ರೇರಣೆ ಮತ್ತು ಅದರ ಕೊಡುಗೆಗಳನ್ನು ವಿಶ್ಲೇಷಿಸಿ.

ಪ್ರ8) ಮಹಿಳಾ ಸಾಹಿತ್ಯದ ಬೆಳವಣಿಗೆ ಮತ್ತು ಕೊಡುಗೆಗಳನ್ನು ವಿವರಿಸಿ.

